## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 61/2020**

ಚಾಸಾ-1 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 23-04-2026

| | | |
|---|---|---|
| ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ಗುರುನಾಥ |
| ವಯಸ್ಸು | : | 43 ವರ್ಷ |
| ಉದ್ಯೋಗ | : | P.I. |
| ವಾಸಸ್ಥಳ | : | ಕುಂಬಳಗೂಡು ಪೋಲಿಸ ಠಾಣೆ, ಬೆಂಗಳೂರು ನಗರ. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ದಿನಾಂಕಃ 01-11-2018 ರಿಂದ 30-10-2019 ರವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 16-07-2019 ರಂದು ಸಂಜೆ 7 ಗಂಟೆಗೆ ಠಾಣೆಯಲ್ಲಿದ್ದಾಗ ಸೊನ್ನದ ಹತ್ತಿರ ಭೀಮಾ ನದಿಯಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವುದಾಗಿ ಖಚಿತ ಭಾತ್ಮಿ ಬಂದ ಮೇರೆಗೆ , ಗುಲಾಬ ಮತ್ತು ಕಲ್ಲಪ್ಪ ಎಂಬುವವರನ್ನು ಬರಮಾಡಿಕೊಂಡು, ದಾಳಿ ಕುರಿತು ತಿಳಿಸಿ ಪಂಚರು, ನಾನು ಹಾಗೂ ಚಾಸಾ 4 ರಿಂದ 6 ರವರೊಂದಿಗೆ ಸೊನ್ನ ಹೊಸ ಬಡಾವಣೆ ಹತ್ತಿರ 7-20 ಕ್ಕೆ ಹೋಗಿ ನಿಂತೆವು. ಆ ಸಮಯಕ್ಕೆ ಮರಳು ತುಂಬಿದ ಒಂದು ಟ್ರಾಕ್ಟರ ಬರುತ್ತಿದ್ದು ನಮ್ಮನ್ನು ನೋಡಿ ಚಾಲಕ ಕತ್ತಲಲ್ಲಿ ಟ್ರಾಕ್ಟರ ಬಿಟ್ಟು ಓಡಿ ಹೋಗಿರುತ್ತಾನೆ. ಟ್ರಾಕ್ಟರ ಪರಿಶೀಲಿಸಿದಾಗ ಮಹಿಂದ್ರಾ ಕಂಪನಿ ಟ್ರಾಕ್ಟರ ಇದ್ದು ಇಂಜನ ಮತ್ತು ಟ್ರಾಲಿಗೆ ಯಾವುದೇ ನೊಂದಣಿ ಸಂಖ್ಯೆ ಇರಲಿಲ್ಲ. ಅದರ ಅಂದಾಜು ಮೌಲ್ಯ 5 ಲಕ್ಷ

ಮತ್ತು ಅದರಲ್ಲಿರುವ ಮರಳು ಅಂದಾಜು 3000/- ಇರುತ್ತದೆ. ನಂತರ ಪಂಚರ ಸಮಕ್ಷಮ ಮರಳು ಮತ್ತು ಟ್ರಾಕ್ಟರ ಜಪ್ತಿ ಪಡಿಸಿಕೊಂಡು, ಫಿರ್ಯಾದಿ ದೂರನ್ನು ನೀಡಿರುತ್ತೇನೆ.

ದಿಃ 18-08-2019 ರಂದು ಟ್ರಾಕ್ಟರ ಚಾಲಕ ಮತ್ತು ಮಾಲಕರು ಸೂಕ್ತ ನ್ಯಾಯಾಲಯದ ಜಾಮೀನಿನೊಂದಿಗೆ ಹಾಜರಾಗಿದ್ದು ಮತ್ತು ನೊಂದಣಿ ಸಂಖ್ಯೆ ಸಹ ಹಾಜರುಪಡಿಸಿರುತ್ತಾರೆ. ಈ ಕುರಿತು ನಾನು ಮರುಹೇಳಿಕೆ ನೀಡಿರುತ್ತೇನೆ.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**3** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಪ್ರ.ವ.ವ. ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ಫಿರ್ಯದಿದಾರ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**4** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**4**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**5** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಟ್ರಾಕ್ಟರನ ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಡಾಲೇ ನಿಪಿ-**1** ಮತ್ತು **2** ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **D.K.** ವಕೀಲರಿಂದಃ-</u>

ಅಫಜಲಪುರದಿಂದ ಸೊನ್ನ 4-5 ಕಿ.ಮಿ. ಇರುತ್ತದೆ. ಆರೋಪಿ ಮೊಬೈಲ ರಿಪೇರಿ ಅಂಗಡಿ ಹೊಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಮ್ಮ ವಾಹನ ನೋಡಿ 50 ಮೀಟರ ಅಂತರದಲ್ಲಿ ತನ್ನ ವಾಹನ ಬಿಟ್ಟು ಓಡಿಒಹೋಗಿರುತ್ತಾನೆ. ಜಪ್ತಿ ಪಂಚನಾಮೆ ಕಾಲಕ್ಕೆ ನಾನು ಮತ್ತು ಸಿಬ್ಬಂದಿ ಇದ್ದೆವು. ಗುನ್ಹೆಸ್ಥಳ ರಸ್ತೆ ಇರುತ್ತದೆ ಎಂದರೆ ಸರಿ. ಪಂಚನಾಮೆಗೆ ಸಾರ್ವಜನಿಕರ ಸಹಿ ಪಡೆದಿಲ್ಲ

ಎಂದರೆ ಸರಿ. ಠಾಣೆಯಿಂದ ಗುನ್ಹೆಸ್ಥಳಕ್ಕೆ ಹೋಗಲು 10 ನಿಮಿಷ ಬೇಕು. ಆರೋಪಿ ಯಾವ ದಿಕ್ಕಿನಲ್ಲಿ ಓಡಿಹೋದ ಎಂದು ಕತ್ತಲಲ್ಲಿ ಕಾಣಿಸಿಲ್ಲ. ಆರೋಪಿ ಜಾಮೀನು ಪಡೆದು ನ್ಯಾಯಾಲಯಕ್ಕೆ ಬಂದಿರುತ್ತಾನೆ. ಗುನ್ಹೆಸ್ಥಳ ಚೆಕ್ಕುಬಂದಿ ಪೂರ್ವ-ಪಶ್ಚಿಮಕ್ಕೆ ಅಫಜಲಪುರ ವಿಜಯಪುರ ಮುಖ್ಯರಸ್ತೆ, ಉತ್ತರಕ್ಕೆ ಹೊಸಬಡಾವಣೆ, ದಕ್ಷಿಣಕ್ಕೆ ಅಂಕಲಗಿ ಎನ್ನುವವರ ಜಮೀನು ಇರುತ್ತದೆ. ನಿಪಿ-1 ಮತ್ತು 2 ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಕಚೇರಿ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ಮೇಲೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ